**ಸಾಕ್ಷಿಯನ್ನು ದಿನಾಂಕಃ 22-12-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿ.ಎಂ.ಭಂಡಾರಿಯವರಿಂದಃ**

ದಿನಾಂಕ 31-07-2020 ರಂದು ನಾನು ಸಿಬ್ಬಂದಿಯೊಡನೆ ಗಸ್ತಿಗೆ ಹೋಗುವಾಗ ಸಿಬ್ಬಂದಿಯನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ. ಆರೋಪಿತರು ಹೋಗುತ್ತಿದ್ದ ಮೋಟಾರು ಸೈಕಲನ್ನು ಸಿಬ್ಬಂದಿಗಳ ಸಹಾಯದಿಂದ ತರಿಸಿಕೊಂಡಿರುತ್ತೇನೆ, ಸ್ಥಳದಲ್ಲೇ ಬಿಟ್ಟಿರುವುದಿಲ್ಲ. ಸದರಿ ಬೈಕನ್ನು ಮರುದಿನ ಪಂಚನಾಮೆ ಮೂಲಕ ಅಮಾನತ್ತುಪಡಿಸಿಕೊಂಡಿರುತ್ತೇನೆ. 31 ನೇ ತಾರೀಕು ಸೆಂಟ್ರಿಯವರ ಸುಪರ್ದಿಯಲ್ಲಿ ಠಾಣಾ ಆವರಣದಲ್ಲಿ ನಿಲ್ಲಿಸಿರುತ್ತೇನೆ. ಆ ದಿನ 2 ಜನ ಅನುಮಾನಾಸ್ಪದವಾಗಿ ಕಂಡಿದ್ದರಿಂದ ಹಿಡಿದಿದ್ದೇವೆ, ಠಾಣೆಗೆ ತಂದಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಕಳುವು ಸ್ಥಳದ ಪಂಚನಾಮೆಯ ಕಾಲಕ್ಕೆ ಈಗಾಗಲೇ ಬೇರೆ ಸುಮಾರು 5 ಪ್ರಕರಣಗಳಲ್ಲಿ ಸ್ಥಳ ಪಂಚನಾಮೆಯನ್ನು ಮಾಡಿರುತ್ತೇನೆ. ಪಂಚರನ್ನು ಮಹಾವೀರ ಎಂಬ ಸಿಬ್ಬಂದಿಯ ಸಹಾಯದಿಂದ ಕರಿಸಿಕೊಂಡಿರುತ್ತೇನೆ. ಮಹಾವೀರ ಎಂಬುವವರು ಒಮ್ಮೆ ಅಮಾನತ್ತುಗೊಂಡಿದ್ದರು ಎಂದರೆ ನನ್ನ ಅವಧಿಯಲ್ಲಿ ಆಗಿರಲಿಲ್ಲ ಎನ್ನುತ್ತಾರೆ. ಮಹಾವೀರ ಎಂಬ ಸಿಬ್ಬಂದಿಯ ಮೂಲಕ ಯಾವುದೇ ಪಂಚರನ್ನು ಕರೆಸದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣದ ಘಟನಾ ಸ್ಥಳದಿಂದ ಸುಮಾರು 20 ಮೀಟರ್ ಅಂತರದಲ್ಲಿ ಇಲಾಖಾ ವಾಹನವನ್ನು ನಿಲ್ಲಿಸಿ ಸ್ಥಳಕ್ಕೆ ನಡೆದುಕೊಂಡು ಹೋಗಿರುತ್ತೇನೆ. ಸ್ಥಳ ಪಂಚನಾಮೆಯ ಕಾಲಕ್ಕೆ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಆರೋಪಿತರು ಘಟನಾ ಸ್ಥಳಕ್ಕೆ ಕರೆದುಕೊಂಡು ಹೋಗದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೊನ್ನಾವರದಲ್ಲಿ ಸರಣಿ ಕಳ್ಳತನ ಪ್ರಕರಣ ದಾಖಲಾಗಿದ್ದು ಮೇಲಾಧಿಕಾರಿಗಳ ಒತ್ತಡದಿಂದ ಎಲ್ಲಾ ಪ್ರಕರಣಗಳನ್ನು ಆರೋಪಿತರ ಮೇಲೆ ದಾಖಲು ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣದಲ್ಲಿ ಯಾವುದೇ ವಸ್ತು ಕಳ್ಳತನವೂ ಆಗಿಲ್ಲ, ನಾನು ಯಾವುದೇ ವಸ್ತು ಜಪ್ತು ಮಾಡಿ ಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಸ್ವ ಇಚ್ಛ ಹೇಳಿಕೆ ನೀಡಿಲ್ಲ ಮತ್ತು ಅವರನ್ನು ಯಾವುದೇ ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ಯಾವುದೇ ಕಾರು ಮತ್ತು ಬೈಕನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೂ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**